


# ದೈತ್ಯ ಚೀನಿಕಾಯಿ!

ಚೀನಿಕಾಯಿ (ಸಿಹಿ ಕುಂಬಳಕಾಯಿ) ಯೊಂದು ವಿಶ್ವ ದಾಖಲೆಯ ಮನ್ನಣೆಗೆ ಪಾತ್ರವಾಗಿದೆ. ಇಂಗ್ಲಿಷ್ ಮಿಡ್‌ಲ್ಯಾಂಡ್ಸ್‌ನ ಲೀಸಿಸ್ಟೆಷೈರ್‌ನಲ್ಲಿರುವ ರೈತ ಗ್ಲೋವರ್ ಇದನ್ನು ಹಸಿರು ಮನೆಯಲ್ಲಿ ಬೆಳೆದವನು. ಇದರ ತೂಕ ಬರೋಬ್ಬರಿ 54 ಕಿಲೋ ಇದೆ. ಇನ್ನೂ ಅದು ಪೂರ್ಣ ಬಲಿತಿಲ್ಲ. ಹಣ್ಣಾಗುವ ತನಕ ಬಳ್ಳಿಯಲ್ಲೇ ಬಿಡುತ್ತಿದ್ದರೆ 60 ಕಿಲೋ ತೂಗುತ್ತಿತ್ತು ಎಂಬುದು ಅವನ ಲೆಕ್ಕಾಚಾರ. ನೆರಳಿನ ಮನೆಯೊಳಗೆ ಚೆನ್ನಾಗಿ ಪೋಷಿಸಿ ಈ ಕುಂಬಳದ ಬಳ್ಳಿಯನ್ನು ಬೆಳೆಸಿ, ಅಧಿಕವಾಗಿ ಸಾರಜನಕ ನೀಡಿದ ಕಾರಣ ಇಷ್ಟು ದೊಡ್ಡ ಕಾಯಿ ಸಿಕ್ಕಿತು ಎಂದು ಕೃಷಿಯ ಗುಟ್ಟನ್ನೂ ಬಿಟ್ಟುಕೊಟ್ಟಿದ್ದಾನೆ.

ಭಾರ ಎತ್ತುವ ಬಲಭೀಮ ಜೊನಾಥನ್ ವಾಕರ್ ಪೀಟರ್ ಸಲೀಸಾಗಿ ಈ ಬಲು ಭಾರದ ಕುಂಬಳಕಾಯಿಯನ್ನು ಎತ್ತುವುದರ ಮೂಲಕ ಕಂಡವರಿಗೆ ಅಚ್ಚರಿ ಮೂಡಿಸಿದರು. ನೂರಾರು ಜನರಿಗೆ ಹೊಟ್ಟೆ ತುಂಬಿಸಲು ಸಾಕಾಗುವಷ್ಟಿದ್ದ ದೈತ್ಯ ಕುಂಬಳಕಾಯಿ ರೈತನಿಗೆ ಹೆಸರು ತಂದುಕೊಟ್ಟಿದೆ.

■ ಪ.ರಾಮಕೃಷ್ಣ ಶಾಸ್ತ್ರಿ

